# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 231 | Pages. 2 | Date: 25-07-2025, FRIDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 231 - ಪುಟಗಳು : 2 - 25 ಜುಲೈ 2025 ಶುಕ್ರವಾರ Ph: 8762954248 ದರ : ₹1


# ಆರ್ಥಿಕ ಮುಗ್ಗಟ್ಟಿಗೆ ಕೇಂದ್ರ, ಕಾರಣ

## ಶಾಸಕ ಕೆ.ಎಂ. ಶಿವಲಿಂಗೇಗೌಡ ಆರೋಪ | ನಾಳೆ ಅರಸೀಕೆರೆಗೆ ಸಿಎಂ, ಡಿಸಿಎಂ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ರಾಜ್ಯದಲ್ಲಿ ಸ್ವಲ್ಪ ಮಟ್ಟಿಗೆ ಆರ್ಥಿಕ ಮುಗ್ಗಟ್ಟು ಉಂಟಾಗಿದೆ ಎಂದರೆ ಅದಕ್ಕೆ ಕೇಂದ್ರ ಸರ್ಕಾರ ಕಾರಣ ಹೊರತು ಗ್ಯಾರಂಟಿ ಯೋಜನೆಗಳಲ್ಲ. ರಾಜ್ಯ ಸರ್ಕಾರದ ಅಭಿವೃದ್ಧಿ ಕಾಮಗಾರಿ ಏನೆಂಬುದಕ್ಕೆ ಜು. 26ರ ಕಾರ್ಯಕ್ರಮ ಸಾಕ್ಷಿ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ಶನಿವಾರ ತಾಲ್ಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯ ಕಾರ್ಯಕ್ರಮದ ಸ್ಥಳ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ತಾಲ್ಲೂಕಿನ ಅಭಿವೃದ್ಧಿಗೆ ನೂರಾರು ಕೋಟಿ ರೂ. ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಹಲವು ಸಚಿವರಿಗೆ ಶನಿವಾರ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ನಾವು ಕಟ್ಟಿದ ತೆರಿಗೆ ಹಣವನ್ನು ಕೇಂದ್ರ ಸರ್ಕಾರ ನ್ಯಾಯಯುತವಾಗಿ ವಾಪಸ್ ಕೊಡುತ್ತಿಲ್ಲ. ಒಂದೊಂದು ರಾಜ್ಯಕ್ಕೆ ಒಂದೊಂದು ರೀತಿ ಮಲತಾಯಿ ಧೋರಣೆ ಮಾಡಲಾಗುತ್ತಿದೆ ಎಂದು ದೂರಿದರು. ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಕುರಿತ ಪ್ರಶ್ನೆಗೆ ಹಿಂದೆ ಅವರು ಏಕೆ ಮಾಡಿದ್ದರು ಎಂದು ಮರು ಪ್ರಶ್ನೆ ಹಾಕಿ ಸರ್ಕಾರದ ನಡೆ ಸಮರ್ಥಿಸಿಕೊಂಡರು.

**ಅದ್ದೂರಿ ಕಾರ್ಯಕ್ರಮಕ್ಕೆ ಸಿದ್ದತೆ:**

ಸರ್ಕಾರಿ ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜು ಉದ್ಘಾಟನೆ ಸೇರಿ ವಿವಿಧ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ಚಾಲನೆಯನ್ನು



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ನೆರವೇರಿಸಲಿದ್ದಾರೆ. ಅದಕ್ಕಾಗಿ ಬೃಹತ್ ವೇದಿಕೆ ಸಿದ್ಧಪಡಿಸಲಾಗುತ್ತಿದ್ದು, ಸುಮಾರು 60 ಸಾವಿರ ಜನ ಭಾಗಿಯಾಗುವ ನಿರೀಕ್ಷೆ ಇದ್ದು, ನಾವೆಲ್ಲರೂ ಸೇರಿ, ನಮ್ಮ ಕ್ಷೇತ್ರಕ್ಕೆ ಕೆಲಸ ಮಾಡಿಕೊಟ್ಟಿರುವವರಿಗೆ ಕೃತಜ್ಞತೆ, ಅಭಿನಂದನೆ ಸಮರ್ಪಣೆ ಮಾಡುತ್ತೇವೆ ಎಂದರು.

ನಮ್ಮ ಸರ್ಕಾರ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡುತ್ತಿದ್ದರೂ, ಸರ್ಕಾರದ ಬಳಿ ಹಣ ಇಲ್ಲ, ಅಭಿವೃದ್ಧಿ ಆಗುತ್ತಿಲ್ಲ ಎಂದು ಆರೋಪ ಮಾಡುತ್ತಿರುವವರಿಗೆ ಈ ಮೂಲಕ ಉತ್ತರ ನೀಡಬೇಕಿದೆ. ನಾಡಿನ ಜನರಿಗೂ ತಿಳಿಸಬೇಕಿದೆ ಎಂದರು.

ಈ ಭಾಗದ ಪ್ರಮುಖ ಬೆಳೆ ತೆಂಗುಗೆ ನಾಲ್ಕು ರೀತಿಯ ರೋಗ ಬಾಧಿಸುತ್ತಿದ್ದು, ಇದರ ಮೂಲೋತ್ಪಾಟನೆಗೆ ಆಂಟಿ ವೈರಸ್ ಸಂಶೋಧನೆ ಮಾಡಲು ರಾಜ್ಯ, ಕೇಂದ್ರ ಸರ್ಕಾರ

> ನನಗೆ ಸರ್ಕಾರದಲ್ಲಿ ಮಂತ್ರಿಸ್ಥಾನ ಕೊಡುವ ವಿಶ್ವಾಸ ಇದೆ. ಅನೇಕ ಸಲ ಸಿಎಂ ಹಾಗೂ ಡಿಸಿಎಂ ಹೇಳಿದ್ದಾರೆ. ಆದರೆ ಆ ಅಪೇಕ್ಷೆ ಇಟ್ಟುಕೊಂಡೇ ನಾನು ಕೆಲಸ ಮಾಡುತ್ತಿಲ್ಲ. ನಾನು 14 ಮತಗಳಿಂದ ಸೋತು ಅರಸೀಕೆರೆಗೆ ಬಂದಾಗ ಇಲ್ಲಿಯ ಜನ ಕೈ ಹಿಡಿದಿದ್ದಾರೆ. ಅವರ ಋಣ ತೀರಿಸುವುದು ನನ್ನ ಉದ್ದೇಶ. ಜೊತೆಗೆ ತೆಂಗು ಬೆಳೆಗಾರರ ಉಳಿಸಬೇಕಿದೆ.
>
> **– ಕೆ.ಎಂ. ಶಿವಲಿಂಗೇಗೌಡ, ಶಾಸಕ**

ಮುಂದಾಗಬೇಕು. ಜೊತೆಗೆ ರೈತರಿಗೆ ಪರಿಹಾರ ನೀಡಬೇಕು. ಅರಸೀಕೆರೆ, ಚನ್ನರಾಯಪಟ್ಟಣ, ತಿಪಟೂರು ಮೊದಲಾದ ಕಡೆ ತೆಂಗು ನಾಶವಾಗುವುದನ್ನು ತಪ್ಪಿಸಬೇಕು. ಇಲ್ಲವಾದರೆ ಕಷ್ಟದ ಸನ್ನಿವೇಶ ಎದುರಾಗಲಿದೆ. ಹೀಗಾಗಿ ಸರ್ಕಾರಗಳು ಸಮರೋಪಾದಿಯಲ್ಲಿ ಕಾರ್ಯೋನ್ಮುಖ ಆಗಬೇಕು ಎಂದು ಒತ್ತಾಯಿಸಿದರು.

ಫಲ ಕೊಡುತ್ತಿರುವ ತೆಂಗು ನಾಶವಾದರೆ ಬೆಳೆದ ಮಕ್ಕಳ ಕಳೆದುಕೊಂಡಂತೆ, ಹಾಗಾಗಿ ಈ ವಿಚಾರದಲ್ಲಾದರೂ ಕ್ಷೇತ್ರದ ಜನತೆ ಹೋರಾಟಕ್ಕೆ ಅಣಿಯಾಗಿ ಎಂದು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಅಧ್ಯಕ್ಷ ಸಮೀವುಲ್ಲಾ, ಉಪಾಧ್ಯಕ್ಷ ಮನೋಹರ್ ಮೇಸ್ತ್ರಿ, ನಗರಯೋಜನಾ ಪ್ರಾಧಿಕಾರದ ಅಧ್ಯಕ್ಷ ಅರುಣ್‌ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಮುರುಂಡಿ ಶಿವಯ್ಯ, ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಸಿಖಂದರ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್ ಇತರರಿದ್ದರು.

# ಮಾರನಹಳ್ಳಿ ಸಮೀಪ ಬಸ್‌ಗಳ ಮುಖಾಮುಖಿ ಡಿಕ್ಕಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನ ಮಾರನಹಳ್ಳಿ ಸಮೀಪದ ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ಎರಡು ಕೆಎಸ್‌ಆರ್‌ಟಿಸಿ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ 25 ಪ್ರಯಾಣಿಕರು ಗಾಯಗೊಂಡಿದ್ದಾರೆ.

ಅವಘಡದಲ್ಲಿ ಬಸ್ ಚಾಲಕ ಸುರೇಶ್ ಎಂಬುವರ ಸ್ಥಿತಿ ಚಿಂತಾಜನಕವಾಗಿದ್ದರೆ ಮತ್ತೆ ಏಳು ಜನರಿಗೆ ಗಂಭೀರ ಹಾಗು ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸಕಲೇಶಪುರ ಕ್ರಾಫರ್ಡ್ ಹಾಗೂ ಹಿಮ್ಸ್‌ನಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಬೆಂಗಳೂರಿನಿಂದ ಮಂಗಳೂರಿಗೆ ತೆರಳುತ್ತಿದ್ದ ಬಸ್‌ಗೆ ಧರ್ಮಸ್ಥಳದಿಂದ ಬೆಂಗಳೂರಿಗೆ ಬರುತ್ತಿದ್ದ ಚನ್ನರಾಯಪಟ್ಟಣ ಡಿಪೋ ಬಸ್ ಡಿಕ್ಕಿಯಾಗಿದೆ. ಸಕಲೇಶಪುರದಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ



ಬಸ್ ಇಳಿಜಾರಿನಲ್ಲಿ ವೇಗವಾಗಿದ್ದರಿಂದ ಚಾಲಕನ ನಿಯಂತ್ರಣಕ್ಕೆ ಸಿಗದೆ ಎದುರುಗಡೆಯಿಂದ ಬರುತ್ತಿದ್ದ ಬಸ್‌ಗೆ ಡಿಕ್ಕಿಯಾಗಿದೆ.

ಇಬ್ಬರೂ ಚಾಲಕರು ಅಪಘಾತ ತಪ್ಪಿಸಲೂ ಕೊನೆಯ ಕ್ಷಣದಲ್ಲಿ ಪ್ರಯತ್ನಿಸಿದರಾದರೂ ಸಾಧ್ಯವಾಗದೆ ಅಪಘಾತ ಸಂಭವಿಸಿದೆ. ಒಂದು ಬಸ್‌ನ ಮುಂಭಾಗ ಸಂಪೂರ್ಣ ಜಖಂಗೊಂಡಿದೆ.

ಧರ್ಮಸ್ಥಳದಿಂದ ಬರುತ್ತಿದ್ದ ಬಸ್‌ನಲ್ಲಿ ಕೇವಲ ಏಳು ಪ್ರಯಾಣಿಕರಿದ್ದರು. ಗಂಭೀರ ಗಾಯಾಳುಗಳನ್ನು ಚಾಲಕ ಸುರೇಶ್, ನಿರ್ವಾಹಕ ಸೋಮಶೇಖರ್, ರಾಜು, ಆಶಾ, ರುಕ್ಮಿಣಿ, ಕುಸುಮಾ, ತೈರುನ್ನಿಸಾ, ರೋಹಿತ್ ಎಂದು ಗುರುತಿಸಲಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಹಾಗೂ ಕೆಎಸ್‌ಆರ್‌ಟಿಸಿ ಡಿಪೋ ಅಧಿಕಾರಿಗಳು ಎರಡೂ ಬಸ್‌ಗಳನ್ನು ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

# ಭ್ರಷ್ಟರ ಕೂಪವಾದ ಪುರಸಭೆ: ಸಿಮೆಂಟ್ ಮಂಜು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪುರಸಭೆಯ ಭ್ರಷ್ಟ ಆಡಳಿತದಿಂದ ಜನರು ಅನೇಕ ಸಮಸ್ಯೆ ಎದುರಿಸುವಂತಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಮಹೇಶ್ವರಿ ನಗರ ಬಡಾವಣೆಯ ಮಾರಮ್ಮ ಸಮುದಾಯ ಭವನದಲ್ಲಿ ಗುರುವಾರ ಸಾರ್ವಜಕರ ಕುಂದು ಕೊರತೆ ಆಲಿಸಿ ಮಾತನಾಡಿ, ಎರಡು ದಶಕಗಳ ಹಿಂದೆ ಸಕಲೇಶಪುರ ಪಟ್ಟಣ ಪುರಸಭೆ ಉತ್ತಮ ಆಡಳಿತದಲ್ಲಿ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿತ್ತು.

ಆದರೆ ಈಗ ಕೆಲ ಭ್ರಷ್ಟ ಜನಪ್ರತಿನಿಧಿಗಳಿಂದ ಆಡಳಿತ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಜನಪ್ರತಿನಿಧಿಗಳಿಗೆ ಇಚ್ಛಾಸಕ್ತಿ ಇಲ್ಲ. ಪುರಸಭೆಯನ್ನು ಹಣ ಮಾಡುವ ಕಚೇರಿನ್ನಾಗಿಸಿಕೊಂಡಿದ್ದಾರೆ ಎಂದು ಕಿಡಿಕಾರಿದರು.

ಮಹೇಶ್ವರಿ ನಗರದ ಸಮುದಾಯ ಭವನಕ್ಕೆ 5 ಲಕ್ಷ ರೂ. ಅನುದಾನ ನೀಡಲಾಗುವುದು. ಆಜಾದ್ ರಸ್ತೆಗೆ ಹೊಂದಿಕೊಂಡಿರುವ ಸ್ಮಶಾನ ಜಾಗ ಒತ್ತುವರಿ ತೆರವುಗೊಳಿಸಿ ಸುತ್ತಲೂ ಬೇಲಿ ನಿರ್ಮಿಸಿ ಕೊಡಲಾಗುವುದು ಎಂದರು.

ಪರಸಭೆ ವ್ಯಾಪ್ತಿಯಲ್ಲಿ ನಿವೇಶನ ರಹಿತರಿಗೆ ಪ್ರಧಾನ ಮಂತ್ರಿ ಆವಾಸ್ ಯೊಜನೆಯಡಿ ಅರ್ಜಿ ಆಹ್ವಾನಿಸಿದ್ದು ವಸತಿ ಹಾಗೂ ನಿವೇಶನ ರಹಿತರು ಅರ್ಜಿ ಸಲ್ಲಿಸಿ ಪ್ರಯೋಜನ ಪಡೆಯಬೇಕು ಎಂದರು. ದೇವಸ್ಥಾನ ಆಡಳಿತ ಮಂಡಳಿ ವತಿಯಿಂದ ಶಾಸಕರಿಗೆ ಸನ್ಮಾನಿಸಲಾಯಿತು.

ಮಾರಮ್ಮ ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ವಿರೂಪಾಕ್ಷ, ಸಮುದಾಯ ಭವನ ಅಧ್ಯಕ್ಷ ಸಂತೋಷ್ ಕುಮಾರ, ಮೊಹನ ಕುಮಾರ, ಸುಬ್ರಹ್ಮಣ್ಯ, ಗೋವಿಂದಸ್ವಾಮಿ ನಾಯ್ಡು, ಚಂದ್ರಮ್ಮ, ರವಿಕುಮಾರ, ಅಪ್ಪಣ್ಣ ಇತರರಿದ್ದರು.

# ರೋಗ ಮುಕ್ತ ಬೆಳೆಗೆ ಬೀಜೋಪಚಾರ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ತಾಲ್ಲೂಕಿನ ಸಣ್ಣಚಾಕನಹಳ್ಳಿ ಹಾಗೂ ದೊಡ್ಡಚಾಕನಹಳ್ಳಿಯಲ್ಲಿ ರೋಗ ಮುಕ್ತ ಬೆಳೆಗೆ ಬೀಜೋಪಚಾರ ಕಾರ್ಯಕ್ರಮ ನಡೆಸಿಕೊಟ್ಟರು.

ತೋಟಗಾರಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಡಿ.ಸಿ. ಕಿರಣ್ ಸಾಗರ್ ಮಾತನಾಡಿ, ಬೀಜೋಪಚಾರದ ಮೂಲಕ ಉತ್ತಮ ಇಳುವರಿ ಪಡೆಯಬಹುದು ಎಂದರು. ಗ್ರಾಮದ ಕುಮಾರಸ್ವಾಮಿ ಅವರಿಂದ ಬೀಜೋಪಚಾರದ ಪ್ರಾತ್ಯಕ್ಷಿಕೆ ಮಾಡಿಸಲಾಯಿತು. ರೈತರೊಂದಿಗೆ ಸಂವಾದ ನಡೆಸಲಾಯಿತು. ವಿದ್ಯಾರ್ಥಿನಿ ಎನ್. ಕವನ ಕಾರ್ಯಕ್ರಮ ನಿರ್ವಹಿಸಿದರು.

# ಗಿಡನೆಟ್ಟು ಪೋಷಿಸುವ ಆಂದೋಲನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಮಾಅತೆ ಇಸ್ಲಾಮೀ ಹಿಂದ್‌ನ ಮಕ್ಕಳ ಶಾಖೆಯಾದ ಚಿಲ್ಡ್ರನ್ ಇಸ್ಲಾಮಿಕ್ ಆರ್ಗನೈಸೇಷನ್ ವತಿಯಿಂದ ಎಲ್ಲೆಡೆ ಗಿಡ ನೆಡುವ ಮತ್ತು ಪೋಷಿಸುವ ರಾಷ್ಟ್ರವ್ಯಾಪಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಸಿಐಒನ ಸದಸ್ಯರಾದ ಆಯತುಲ್ಲಾ ಖಾನ್, ಹುರ್‍ಯ್ಫಾ ಅಹ್ಮದ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ



ಮಾತನಾಡಿ, ಹಾಸನದಲ್ಲೂ ಸಹ ಈ ಅಭಿಯಾನದ ಅಂಗವಾಗಿ ಪ್ರಸ್ತುತ 150 ಗಿಡಗಳನ್ನು ನೆಟ್ಟು ಸಂರಕ್ಷಿಸಲಾಗಿದೆ. ನಗರದ 6 ಶಾಲೆಗಳಿಗೆ ಭೇಟಿ ನೀಡಿ 800 ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ಮತ್ತು ರ್‍ಯಾಲಿಗಳನ್ನು ಹಮ್ಮಿ ಕೊಳ್ಳಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅಮ್ಮಾರ್ ಷರೀಫ್, ಝುನೈರಾ ಕೌನೇನ್ ಆಯ್ರಾ ಫಾತಿಮಾ, ತಸ್ಮಿಯಾ ಫಿರ್ದೋಸ್ ಮತ್ತು ಜಾಹೆದಾ ಹಾಜರಿದ್ದರು.

# ಹುಡಾ: ಗೌಡಗೆರೆ ಪ್ರಕಾಶ್ ಪರಿಗಣಿಸಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನ ನಗರಾಭಿವೃದ್ಧಿ ಪ್ರಾಧಿಕಾರ (ಹುಡಾ) ಅಧ್ಯಕ್ಷ ಸ್ಥಾನವನ್ನು ಹಾಸನ ವಿಧಾನಸಭಾ ಕ್ಷೇತ್ರದವರಿಗೇ ನೀಡಬೇಕು ಎಂದು ನಿಡುಗರಹಳ್ಳಿ ಸಿದ್ದಪ್ಪ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಗೌಡಗೆರೆ ಪ್ರಕಾಶ್ ಅವರು ಹಿಂದೆ ಎಪಿಎಂಸಿ ಅಧ್ಯಕ್ಷರಾಗಿದ್ದರು. 30 ವರ್ಷದಿಂದ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದು, ವಿದ್ಯಾರ್ಥಿ ದಿನಗಳಿಂದಲೂ ಪಕ್ಷಕ್ಕೆ ದುಡಿಯುತ್ತಿರುವ ಅವರಿಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು.

ಜನಪರ ಚಟುವಟಿಕೆ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರಕಾಶ್ ಅವರನ್ನು ಹುಡಾ ಅಧ್ಯಕ್ಷರನ್ನಾಗಿ ಮಾಡಿದರೆ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷ ಬಲವರ್ಧನೆಗೆ ಅನುಕೂಲ ಆಗಲಿದೆ ಎಂದರು. ಅರಸೀಕೆರೆ ಅಥವಾ ಬೇರೆ ವಿಧಾನಸಭಾ ಕ್ಷೇತ್ರಗಳ ಮುಖಂಡರಿಗೆ ಅವಕಾಶ ನೀಡಿದರೆ ಏನೂ ಪ್ರಯೋಜನ ಆಗದು. ಬೇರೆ ಕ್ಷೇತ್ರದವರನ್ನು ಇಲ್ಲಿಗೆ ತರುವ ಕೆಲಸ ಮಾಡಬೇಡಿ. ಗೃಹ ಮಂಡಳಿ ಅಧ್ಯಕ್ಷರೂ ಆದ ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡರು, ಸಂಸದ ಶ್ರೇಯಸ್ ಪಟೇಲ್ ಅವರಿಗೆ ಎಲ್ಲ ವಿಚಾರಗಳು ತಿಳಿದಿವೆ ಎಂದರು.

# ಜು. 30ಕ್ಕೆ ವಾಹನ ಚಾಲಕರಿಗೆ ಆರೋಗ್ಯ ತಪಾಸಣೆ

## ದುಶ್ಚಟಕ್ಕೆ ದಾಸರಾಗಬೇಡಿ | ಜಿಲ್ಲಾಧಿಕಾರಿ ಲತಾಕುಮಾರಿ ಸಲಹೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಒತ್ತಡ, ದುಶ್ಚಟ, ಅವೈಜ್ಞಾನಿಕ ಜೀವನ ಪದ್ಧತಿಯಿಂದಾಗಿ ವಾಹನ ಚಾಲಕರಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿದ್ದು ಆರೋಗ್ಯದ ಕಡೆಗೆ ಗಮನ ಹರಿಸಬೇಕು. ಆರೋಗ್ಯ ದೃಷ್ಟಿಯಿಂದ ಜು. 30ಕ್ಕೆ ವಾಹನ ಚಾಲಕರಿಗಾಗಿ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ವಾಹನ ಚಾಲಕರಿಗೆ ಗುರುವಾರ ಹಮ್ಮಿಕೊಂಡಿದ್ದ ಹೃದಯಾಘಾತ ತಡೆ ಬಗ್ಗೆ ಅರಿವು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ನೂರಾರು ಜನರ ಜೀವ-ಜೀವನ ಚಾಲಕರ ಕೈಯಲ್ಲಿರುತ್ತದೆ. ಹಾಗಾಗಿ ಮಾನಸಿಕ ಮತ್ತು ದೈಹಿಕವಾಗಿ ತಮ್ಮ ಆರೋಗ್ಯದ ಕಡೆಗೆ ಗಮನ ಹರಿಸಬೇಕು. ಹೆಚ್ಚಿನ ಸಮಯ ಮೀಸಲಿಟ್ಟು ಉತ್ತಮ ಜೀವನ



ಶೈಲಿ ರೂಢಿಸಿಕೊಳ್ಳಬೇಕು ಎಂದರು. ಇತ್ತೀಚಿನ ವರದಿ ಪ್ರಕಾರ ಶೇ. 100ರಲ್ಲಿ ಶೇ. 30 ರಷ್ಟು ವಾಹನ ಚಾಲಕರು ಹೃದಯಘಾತದಿಂದ ಮೃತಪಡುತ್ತಿದ್ದಾರೆ. ಅದಕ್ಕೆ ಕಾರಣ ಮಾನಸಿಕ ಒತ್ತಡ, ದುಶ್ಚಟ ಕಾರಣವಾಗಿರಬಹುದು. ಆದ್ದರಿಂದ ಅವುಗಳನ್ನು ಬಿಟ್ಟು ಶಿಸ್ತುಬದ್ಧ ಜೀವನ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಚಾಲಕರು ಆರೋಗ್ಯವಾಗಿದ್ದರೆ ಅವರ ಕುಟುಂಬ, ಸಮಾಜ ಆರೋಗ್ಯವಾಗಿರುತ್ತದೆ. ಮಾನಸಿಕವಾಗಿ ದೈಹಿಕವಾಗಿ ಉತ್ತಮ ಆರೋಗ್ಯವನ್ನು ಇಟ್ಟುಕೊಳ್ಳುವುದೇ ನಿಜವಾದ ಸಾಧನೆಯಾಗಿದೆ. ವಾಹನ ಚಾಲಕರ ಅನುಕೂಲಕ್ಕಾಗಿ ಜು. 30ರಂದು ಆರೋಗ್ಯ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಜೊತೆಗೆ ಸರ್ಕಾರವು ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆಗಳಂತಹ ಅನೇಕ ಯೋಜನೆಗಳನ್ನು ನಿಮ್ಮ ಅನುಕೂಲಕ್ಕೆ ನೀಡಿದೆ. ಅವುಗಳ ಸದುಪಯೋಗ ಪಡೆಯಿರಿ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ನಿತ್ಯ 45 ನಿಮಿಷದ ನಡಿಗೆ 10 ವರ್ಷದ ಆಯಸ್ಸನ್ನು ಹೆಚ್ಚಿಸುತ್ತದೆ. ದಿನಕ್ಕೆ ಒಂದು ಗಂಟೆಯಾದರೂ ಆರೋಗ್ಯಕ್ಕಾಗಿ ಮೀಸಲಿಡಬೇಖು. ಆರೋಗ್ಯದ ಜೊತೆಗೆ ಕುಟುಂಬದ ಸ್ವಾಸ್ಥ್ಯ ಕಾಪಾಡಿಕೊಳ್ಳಬೇಖು. ವಾಹನ ಚಾಲನೆಯಲ್ಲಿ ಎಚ್ಚರಿಕೆ ಇರಲಿ. ನಿದ್ರೆ, ಆಹಾರ, ಆರೋಗ್ಯದತ್ತ ಗಮನ ಹರಿಸಿ ಎಂದು ತಿಳಿಸಿದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್, ಹಿಮ್ಸ್ ನಿರ್ದೇಶಕ ಡಾ. ರಾಜಣ್ಣ, ಪ್ರಾದೇಶಿಕ ಸಾರಿಗೆ ಅಧಿಕಾರಿ ಜೆ.ಪಿ. ಪ್ರಕಾಶ್, ಕೆಎಸ್‌ಆರ್‌ಟಿಸಿ ಪ್ರಾಂಶುಪಾಲರಾದ ಗೀತಾಂಜಲಿ, ಕಾರ್ಮಿಕ ಕಲ್ಯಾಣ ಅಧಿಕಾರಿ ಕೆ.ಟಿ. ರವಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಚೇತನ್, ಆರ್‌ಸಿಹೆಚ್ ಅಧಿಕಾರಿ ಡಾ. ಶಿವಶಂಕರ್, ಜಿಲ್ಲಾಶಸ್ತ್ರಕಿತ್ಸಕ ಡಾ. ನಾಗಪ್ಪ, ಡಾ. ನಾಗೇಶ್‌ಆರಾಧ್ಯ, ಮನೋರೋಗ ತಜ್ಞೆ ಡಾ. ಸುನೀತಾ, ಕಾರ್ಲೆ ವೈದ್ಯಾಧಿಕಾರಿ ಡಾ. ತೇಜಸ್ವಿ ಮತ್ತಿತರರಿದ್ದರು.

# ಇಂದು ಸಂಜೆ ಕಲಾಭವನದಲ್ಲಿ ತಂತಿ

ಮನೆಯೊಳಗಿನ ಸಂಬಂಧದ ಹೆಣಿಗೆ ಚೆನ್ನಾಗಿದ್ದರೆ ಅದರ ಸುಖವೇ ಬೇರೆ. ಆದರೆ ಆ ಹೆಣಿಗೆ ಸಡಿಲವಾದರೆ ಏನೇನು ಅನುಭವಿಸಬೇಕಾಗುತ್ತೆ...?

ಮೊನ್ನೆ ತಂತಿ ನಾಟಕದ ತಾಲೀಮು ನೋಡಲು ಹೋಗಿದ್ದೆ... ಇಡೀ ನಾಟಕದ ತುಂಬ ಭಾವಗಳ ತಲ್ಲಣಗಳು ಅಲುಗಾಡಿಸಿಬಿಟ್ಟವು.

ಮನೆ ಎಂದರೆ ಒಬ್ಬರಿಗೊಬ್ಬರು ಅರ್ಥವಾಗೋದು...

ಮನೆ ಎಂದರೆ ಒಬ್ಬರನ್ನೊಬ್ಬರು ಗೌರವಿಸೋದು...

ಮನೆ ಎಂದರೆ ಇನ್ನೂ ಚಿಗುರುವ ಮಗುವಿನ ಮುಗ್ದತೆ...

ಮನೆ ಎಂದರೆ ತಾನೇ ಬುದ್ಧಿವಂತ ಅಂದುಕೊಂಡವರ ಚಿತಾವಣೆ...

ಮನೆ ಎಂದರೆ ಮನೆತನದ ಗೌರವ ಕಾಪಾಡಿಕೊಳ್ಳೋದು...

ಮನೆ ಎಂದರೆ ಹೀಗೆ ಏನೆಲ್ಲಾ ಆಗುವುದು.





## ಉಚಿತ ಪ್ರವೇಶ

ಹಾಸನ: ನಗರದ ರಂಗ ಹೃದಯ ತಂಡದಿಂದ ಶುಕ್ರವಾರ ಸಂಜೆ 5.30ಕ್ಕೆ ಕಲಾಭವನದಲ್ಲಿ ರಾಜೇಂದ್ರ ಕಾರಂತ ಅವರ ತಂತಿ ನಾಟಕ ಪ್ರದರ್ಶನ ನಡೆಯಲಿದೆ.

ಕೆ.ವಿ.ಅಜೇಯ ಸಿಂಹ ಅವರ ನಿರ್ದೇಶನದ ಈ ನಾಟಕವು ಸದಭಿರುಚಿಯ ಸಾಂಸಾರಿಕ ಕಥಾ ಹಂದರ ಹೊಂದಿದೆ. ಪೂಜಾ ರಘುನಂದನ್, ಗುರುರಾಜ್ ಹುಲಿಕಲ್, ಯತೀಶ್ ಪ್ರದೀಪ್, ಪುಟಾಣಿ ಚಂದನ್, ಮಮತಾ, ಜಗದೀಶ್ ಸೇರಿ ಹಲವು ಕಲಾವಿದರು ಅಭಿನಯಿಸಿದ್ದಾರೆ. ವಾಣಿ ನಾಗೇಂದ್ರ, ನಾಟಕಕ್ಕೆ ಸಂಗೀತ ನೀಡಿದ್ದಾರೆ. ನಾಟಕಕ್ಕೆ ಉಚಿತ ಪ್ರವೇಶವಿದೆ.

ಇಡೀ ನಾಟಕದ ತುಂಬಾ ನುರಿತ ಕಲಾವಿದೆ ಪೂಜಾ ಹರಿದಾಡುತ್ತಾಳೆ. ಕಾಡುತ್ತಾರೆ... ಗುರುರಾಜ ಹುಲಿಕಲ್ ಎಂಬ ಸಹಜನಟನ ಚಂದವೇ ಬೇರೆ. ಪ್ರದೀಪ್ ರಂಗಾಯಣ ಸದಾ ಆಶಾವಾದ. ರಂಗಾಯಣದ ಅಚ್ಚು ಪ್ರತಿಹೆಜ್ಜೆ. ಯದೀಶ್ ಅವರದ್ದು ಕಟ್ಟುವ ಕೆಲಸದ ಕಠಿಣ ಪಾತ್ರ. ಅಜೇಯಸಿಂಹ ನಿರ್ದೇಶನದ ಜೊತೆಗೆ ಸಮತೂಕದ ಪಾತ್ರ. ಜಗದೀಶ ಹಾಗು ಮಂಜುಳಾ ಅವರದ್ದು ಅಲ್ಲಲ್ಲೇ ನಿರ್ಣಾಯಕ.

ವಾಣಿ ನಾಗೇಂದ್ರ ಅವರ ಕಂಪೋಸಿಷನ್ ರಂಗವನ್ನೇ ವೀಣೆಯ ತಂತಿಗೆ ಹೆಣೆದಂತಹಾ ಹದ.

ಶುಕ್ರವಾರ (ಜು. 25) ಸಂಜೆ ಹಾಸನದ ಕಲಾಭವನದಲ್ಲಿ ನಿಜಕ್ಕೂ ಕುಟುಂಬದವರೆಲ್ಲಾ ಬನ್ನಿ...

ಗಂಡಹೆಂಡತಿ... ಪ್ರೀತಿ ಪ್ರೇಮ... ಕುಟುಂಬ... ಸಂಬಂಧ ಅಂತ ಇರುವ ತನಕ ತಂತಿಯಂತಹಾ ನಾಟಕಗಳು ಸದಾ ಪ್ರಸ್ತುತ. ತಪ್ಪದೇ ಹಾಸನದ ಕಲಾಭವನಕ್ಕೆ ಶುಕ್ರವಾರ ಸಂಜೆ ಬನ್ನಿ...

ತಂತಿಯು ಮುಳ್ಳು ತಂತಿಯ ಬಂಧನದ ಬೇಲಿಯೋ... ಇಲ್ಲ ಬಿಡುಗಡೆಯೆಂಬ ವೀಣೆಯ ಸಪೂರ... ನೇರ ಕಂಪನದ ಇಂಪಾದ ಸ್ವರವೋ ನಿಮಗೇ ತಿಳಿಯಲಿದೆ...

–ಚಲಂ

# ಹೃದಯಾಘಾತಕ್ಕೆ ಕೋವಿಡ್ ವ್ಯಾಕ್ಸಿನ್ ಕಾರಣವಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಮಧುಮೇಹ, ರಕ್ತದೊತ್ತಡದಿಂದ ಹೃದಯಾಘಾತ ಸಂಭವಿಸುತ್ತಿದೆ, ಕೋವಿಡ್ ಲಸಿಕೆ ಪಡೆದವರಿಗೆ ಸಮಸ್ಯೆ ಆಗುತ್ತಿದೆ ಎಂಬ ವದಂತಿಗೆ ಕಿವಿಗೊಡಬೇಡಿ ಎಂದು ನಾರಾಯಣ ಹೃದಯಾಲಯದ ಸಂಚಾರಿ ಆಸ್ಪತ್ರೆ ವ್ಯವಸ್ಥಾಪಕ ದೇವರಾಜ ನಾಯಕ್ ಅವರು ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ





ಆವರಣದಲ್ಲಿ ನಾರಾಯಣ ಹೆಲ್ತ್ ಗ್ರೂಪ್ ಹಾಗೂ ತಾಲ್ಲೂಕು ಆರೋಗ್ಯ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಸಂಚಾರಿ ವಾಹನ ಹೃದ್ರೋಗ ಉಚಿತ ತಪಾಸಣಾ ಶಿಬಿರದಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹಠಾತ್ ಹೃದಯಾಘಾತ ಸಂಭವಿಸಲು ನಮ್ಮ ಬದಲಾದ ಜೀವನ ಶೈಲಿ, ಆಹಾರ ಪದ್ಧತಿ, ಮಾನಸಿಕ ಒತ್ತಡ ಕಾರಣ ಎಂದರು.

ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ನಾಗೇಂದ್ರ, ಮಾತನಾಡಿ, ಹೃದಯ ಸಂಬಂಧಿ ಹಾಗೂ ಇತರೆ ಕಾಯಿಲೆಗಳಿಂದ ಯಾರೂ ಉದ್ವೇಗಕ್ಕೆ ಒಳಗಾಗಬಾರದು. ಇಂತಹ ಎಲ್ಲಾ ಕಾಯಿಲೆಗಳನ್ನು ಆರಂಭದ ಹಂತದಲ್ಲಿ ತಪಾಸಣೆಯಿಂದ ಗುರುತಿಸಿ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.

ಮಧುಮೇಹ ಹಾಗು ಅಧಿಕ ರಕ್ತದೊತ್ತಡ ಇರುವ ವ್ಯಕ್ತಿಗಳು ಆರೋಗ್ಯ ತಪಾಸಣೆಗೆ ಒಳಗಾಗುವುದು ಸೂಕ್ತ ಎಂದು ಸಲಹೆ ನೀಡಿದರು.

ಸಂಚಾರಿ ಆರೋಗ್ಯ ಶಿಬಿರದಲ್ಲಿ ಎಕ್ಸ್ ರೇ, ಇಸಿಜಿ, ಎಕೋ ಸೇರಿ ರಕ್ತ ಪರೀಕ್ಷೆಗಳನ್ನು ಉಚಿತವಾಗಿ ಮಾಡಲಾಯಿತು. ನಾರಾಯಣ ಹೆಲ್ತ್ ಸಂಯೋಜಕರಾದ ದೇವರಾಜ್, ರಘು, ಶುಶ್ರೂಷಕಿಯರಾದ ಶಿಲ್ಪಾ, ಅನಿತಾ ಹಾಗೂ ಗಗನ, ಸಾರ್ವಜನಿಕ ಆಸ್ಪತ್ರೆ ಶುಶ್ರೂಷಕಿಯರಾದ ಕವಿತಾ, ಅಶ್ವಿತಾ, ಅನು, ಚಂದ್ರಕುಮಾರಿ, ಭವ್ಯ ಕರ್ತವ್ಯ ನಿರ್ವಹಿಸಿದರು.

ಡಾ. ಸೆಲ್ವಕುಮಾರ್, ಡಾ. ಕುಸುಮಾ, ಡಾ. ಅಜಯ್, ಮೀನಾಕ್ಷಿ ಮತ್ತಿತರರಿದ್ದರು.

# ಕಣ್ಣಿನ ರಕ್ಷಣೆ ಮುಖ್ಯವಾದುದು: ಪೂರ್ಣಿಮಾ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಆಲೂರು: ಮನುಷ್ಯನಿಗೆ ಕಣ್ಣು ಅವಿಭಾಜ್ಯ ಅಂಗವಾಗಿರುವುದರಿಂದ ಅದರ ರಕ್ಷಣೆ ಮಾಡಿಕೊಳ್ಳುವುದು ಎಲ್ಲರ ಕರ್ತವ್ಯವಾಗಬೇಕು ಎಂದು ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆ ಮುಖ್ಯ ಶಿಕ್ಷಕಿ ಸಿ.ಎಸ್. ಪೂರ್ಣಿಮಾ ತಿಳಿಸಿದರು.

ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಹಾಸನ ಸುನಂದ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಕಣ್ಣಿನ ತಪಾಸಣೆ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಮನುಷ್ಯನಲ್ಲಿರುವ ಎಲ್ಲ ಅಂಗಗಳಿಗಿಂತ ಕಣ್ಣು ಅತಿ ಮುಖ್ಯವಾದುದು. ಒಮ್ಮೆ ದೃಷ್ಟಿ ನಾಶವಾದರೆ ಮರಳಿ ದೃಷ್ಟಿ ತರುವುದು ಕಷ್ಟವಾಗುತ್ತದೆ. ಕಣ್ಣು ದೃಷ್ಟಿ ಚೆನ್ನಾಗಿದ್ದರೆ ಏನನ್ನಾದರೂ ಸಾಧಿಸಲು ಅನುಕೂಲಾಗುತ್ತದೆ. ಕಣ್ಣು ದೃಷ್ಟಿ ಉತ್ತಮವಾಗಿರಲಿ ಎಂಬ ಉದ್ದೇಶದಿಂದ ಕೆಲ ದಶಕಗಳ ಹಿಂದೆ ನಂಜಬಟ್ಟಲು ಹೂ ಬಳಸಿ ಕರಿ ಮಾಡಿ ಹರಳೆಣ್ಣೆಯೊಂದಿಗೆ ಬೆರೆಸಿ ಕಣ್ಣಿನ ಎರಡೂ ರೆಪ್ಪೆಗಳಿಗೆ ಹಚ್ಚುತ್ತಿದ್ದರು. ಇದರಿಂದ ಕಣ್ಣಿಗೆ ತಗಲುವ ಅನೇಕ ರೋಗಗಳನ್ನು ತಡೆಯಬಹುದಾಗಿದೆ.

ಜನರು ಆಧುನಿಕ ಜೀವನ ಶೈಲಿಗೆ ಮಾರುಹೋಗಿ ಆರೋಗ್ಯದ ಬಗ್ಗೆ ಜವಾಬ್ದಾರಿ ಕಡಿಮೆಯಾಗುತ್ತಿದೆ. ಆರೋಗ್ಯವೇ ಶ್ರೀಮಂತಿಕೆ ಎಂಬುದನ್ನು ಎಂದಿಗೂ ಮರೆಯಬಾರದು. ಮಕ್ಕಳ ದೃಷ್ಟಿಯ ಬಗ್ಗೆ ಪೋಷಕರು ಮತ್ತು ಶಾಲೆಯಲ್ಲಿ ಶಿಕ್ಷಕರು ಆಗಾಗ ಗಮನಿಸುತ್ತಿರಬೇಕು. ಕಣ್ಣಿನ ದೃಷ್ಟಿಯಲ್ಲಿ ತೊಂದರೆಯುಂಟಾದ ಸಂದರ್ಭದಲ್ಲಿ ಕೂಡಲೆ ವೈದ್ಯರನ್ನು ಸಂಪರ್ಕಿಸಿ, ವೈದ್ಯರ ನಿರ್ದೇಶನದಂತೆ ತೊಂದರೆ ನಿವಾರಿಸಿಕೊಳ್ಳಬೇಕು ಎಂದರು.

ಸುನಂದ ಕಣ್ಣಿನ ಆಸ್ಪತ್ರೆ ಆಡಳಿತಾಧಿಕಾರಿ ಡಾ. ನವೀನ್ ಮಾತನಾಡಿ, ಕಣ್ಣನ್ನು ಪ್ರತಿದಿನ ಬೆಳಗ್ಗೆ ಶುದ್ಧವಾದ ತಣ್ಣೀರಿನಿಂದ ತೊಳೆಯಬೇಕು. ಹೆಚ್ಚಾಗಿ ಮೊಬೈಲ್ ಮತ್ತು ಟಿ.ವಿ. ನೋಡುವುದನ್ನು ಬಿಡಬೇಕು. ಇಲ್ಲದಿದ್ದರೆ ಕಣ್ಣು ದೃಷ್ಟಿ ಮಂದಗತಿಗೆ ಸಾಗುತ್ತದೆ. ತಲೆಗೆ ಸದಾ ಎಣ್ಣೆ ಹಾಕುವುದರಿಂದ ಕಣ್ಣಿನ ದೃಷ್ಟಿ ಉತ್ತಮವಾಗುತ್ತದೆ. ಕಣ್ಣು ದೃಷ್ಟಿಯಲ್ಲಿ ವ್ಯತ್ಯಾಸ ಉಂಟಾದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳಬೇಕು ಎಂದರು.

ಶಿಬಿರದಲ್ಲಿ 280 ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಕಣ್ಣು ತಪಾಸಣೆ ಮಾಡಲಾಯಿತು. 28 ವಿದ್ಯಾರ್ಥಿಗಳಲ್ಲಿ ನ್ಯೂನತೆ ಇರುವುದು ಕಂಡುಬಂದಿತು. ಮುಂದಿನ ಚಿಕಿತ್ಸೆಗೆ ಸಲಹೆ ನೀಡಲಾಯಿತು. ನೇತ್ರತಜ್ಞೆ ನವ್ಯ ಮತ್ತಿತರರಿದ್ದರು.

# ವಾಹನ ನಿಲುಗಡೆ ವ್ಯವಸ್ಥೆ ಪರಿಶೀಲಿಸಿದ ಶಾಸಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನ ದೋಣಿಗಲ್ ಬಳಿ ಇರುವ ಪ್ರವಾಸಿತಾಣ ಮಂಜರಾಬಾದ್ ಕೋಟೆ ವೀಕ್ಷಣೆ ಬರುವ ಪ್ರವಾಸಿಗರ ವಾಹನ ಪಾರ್ಕಿಂಗ್ ವ್ಯವಸ್ಥೆಯನ್ನು ಶಾಸಕ ಸಿಮೆಂಟ್ ಮಂಜು ಪರಿಶೀಲಿಸಿದರು.

ಟಿಪ್ಪು ಸುಲ್ತಾನ್ ಕಾಲದ ಮಂಜರಾಬಾದ್ ಕೋಟೆ ವೀಕ್ಷಣೆ ಪ್ರತಿದಿನ ನೂರಾರು ಸಂಖ್ಯೆಯಲ್ಲಿ ಪ್ರವಾಸಿಗರು ಬರುವುದರಿಂದ ತಮ್ಮ ವಾಹನಗಳನ್ನು ಹೆದ್ದಾರಿ ಪಕ್ಕದಲ್ಲೇ ನಿಲ್ಲಿಸಬೇಕಿತ್ತು. ಇದರಿಂದ ಮಂಗಳೂರು, ಧರ್ಮಸ್ಥಳ, ಬ್ಯಾಕರವಳ್ಳಿ ಮಾರ್ಗವಾಗಿ ತೆರಳುವ ವಾಹನಗಳಿಗೆ ತೊಂದರೆ ಉಂಟಾಗುತ್ತಿತ್ತು. ವಾಹನ ದಟ್ಟಣೆಯಿಂದ ಟ್ರಾಫಿಕ್ ಸಮಸ್ಯೆ ಎದುರಾಗುತ್ತಿತ್ತು.

ಈ ಹಿನ್ನಲೆ ಮಂಗಳೂರು-ಬೆಂಗಳೂರು ರಾಷ್ಟ್ರೀಯ



ಹೆದ್ದಾರಿ-75ರಲ್ಲಿ ವಾಹನ ದಟ್ಟಣೆ ತಡೆಗಟ್ಟುವ ಸಲುವಾಗಿ ಮಂಜರಾಬಾದ್ ಕೋಟೆ ಬಳಿ ಪ್ರವಾಸಿಗರ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಸ್ಥಳಕ್ಕೆ ಭೇಟಿ ನೀಡಿ ಶಾಸಕರು ಪರಿಶೀಲನೆ ನಡೆಸಿ, ಪಾರ್ಕಿಂಗ್ ಸ್ಥಳದಲ್ಲಿ ಬೆಳೆದಿರುವ ಗಿಡಗಂಟಿಯನ್ನು ತೆರವುಗೊಳಿಸಿ, ಮೂಲಭೂತ ಸೌಕರ್ಯ ಕಲ್ಪಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ವೇಳೆ ದೋಣಿಗಲ್ ಬಳಿ ರಾಷ್ಟ್ರೀಯ ಹೆದ್ದಾರಿ ಗುಂಡಿ ಬಿದ್ದು ಹಾಳಾಗಿದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಶಾಸಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಶೀಘ್ರವಾಗಿ ಗುಂಡಿಗಳನ್ನು ಮುಚ್ಚುವಂತೆ ಸೂಚಿಸಿದೆ.

# ಹೃದಯಕ್ಕಾಗಿ ಹೆಜ್ಜೆ ಜಾಗೃತಿ ಜಾಥಾ ಯಶಸ್ವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಅರಕಲಗೂಡು: ತಾಲ್ಲೂಕು ಆಡಳಿತ ಮತ್ತು ಆರೋಗ್ಯ ಇಲಾಖೆ ವತಿಯಿಂದ ಬುಧವಾರ ನಡೆದ ಹೃದಯಕ್ಕೆ ಹೆಜ್ಜೆ ಹಾಕೋಣ,ಆರೋಗ್ಯವನ್ನು ಗೆಲ್ಲೋಣ ಜನ ಜಾಗೃತಿ ಜಾಥಾ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು.

ಪಟ್ಟಣದ ತಾಲ್ಲೂಕು ಕಚೇರಿ ಆವರಣದಿಂದ ಆರಂಭಗೊಂಡ ಜಾಥಕ್ಕೆ ಶಾಸಕ ಎ.ಮಂಜು ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು. ಇಲ್ಲಿಂದ ಆರಂಭಗೊಂಡ ಕಾಲ್ನಡಿಗೆ ಜಾಥಾವು ಪಟ್ಟಣದ ದೊಡ್ಡಮ್ಮ ವೃತ್ತ, ಅನಕೃ ವೃತ್ತ ಮೂಲಕ ಸಾಗಿ ಸಂತೆಮರೂರು ವೃತ್ತದಲ್ಲಿ ಸಮಾವೇಶಗೊಂಡಿತು. ಶಾಸಕ ಎ. ಮಂಜು ಮಾತನಾಡಿ, ಇತ್ತೀಚಿನ ಅನಾರೋಗ್ಯ ಸಮಸ್ಯೆ, ಹೃದಯಾಘಾತ ಹಾಗೂ ಇತರೆ ಸಮಸ್ಯೆಗಳಿಗೆ ಜನರು ತುತ್ತಾಗುತ್ತಿರುವುದನ್ನು ಗಮನಿಸಿದರೆ ಪ್ರತಿಯೊಬ್ಬರೂ ಕೂಡ ಆರೋಗ್ಯ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕಿದೆ. ಪ್ರಮುಖವಾಗಿ ಆಹಾರ ಸೇವನ ರೀತಿಗಳನ್ನು ಸಹ ಬದಲಿಸಿಕೊಳ್ಳಬೇಕಿದೆ ಎಂದರು.

ಮನುಷ್ಯನ ಹೃದಯ ಸದಾ ಚಲನವಲನದಿಂದ ಕೂಡಿರಬೇಕು. ಸೋಮಾರಿತನದಿಂದ ಆರೋಗ್ಯವನ್ನು ಹಾಳುಮಾಡಿಕೊಳ್ಳುವ ಬದಲು ಪ್ರತಿನಿತ್ಯವೂ ಒಂದು ಗಂಟೆಯಾದರೂ ಕೂಡ ನಡಿಗೆಯನ್ನು ಕೈಗೊಳ್ಳಬೇಕು. ಇದು ಹೃದಯದ ಆರೋಗ್ಯಕ್ಕೆ ಸಂಜೀವಿನಿಯಾಗಲಿದೆ. ಈ ಸಲುವಾಗಿ ಇಂದು ನೂರಾರು ಜನರೊಂದಿಗೆ ಒಂದು ಗಂಟೆ ಕಾಲಹೆಜ್ಜೆ ಹಾಕಿ ಜಾಗೃತಿ ಮೂಡಿಸಲಾಗಿದೆ. ನಿರಂತರವಾಗಿ ಪಾಲನೆ ಮಾಡಬೇಕೆಂದು ಅವರು ಮನವಿ ಮಾಡಿದರು.

ಇಂದು ಶಾಸಕರ ಮಾರ್ಗದರ್ಶನದಲ್ಲಿ ಜರುಗಿದ ಹೃದಯಕ್ಕಾಗಿ ನಡೆ ಜನ ಜಾಗೃತಿ ಜಾಥದಲ್ಲಿ ಅಧಿಕಾರಿಗಳು, ಸಿಬ್ಬಂದಿ, ಸಂಘ ಸಂಸ್ಥೆಗಳ ಮುಖಂಡರು, ಸಾರ್ವಜನಿಕರು ಕೆಂಪು ಬಣ್ಣದ ಉಡುಪು ತೊಟ್ಟು ಹೃದಯದ ಆರೋಗ್ಯಕ್ಕಾಗಿ ಹೆಜ್ಜೆಹಾಕಿದ್ದೀರಿ. ಈ ಹೆಜ್ಜೆ ನಿತ್ಯ ಜೀವನದಲ್ಲಿ ಕಡ್ಡಾಯಗೊಳ್ಳಲಿ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ತಿಳಿಸಿದರು.

ಜಾಥಾದಲ್ಲಿ ತಹಶೀಲ್ದಾರ್ ಸೌಮ್ಯ, ಪಿಎಸ್ಐ ಕಾವ್ಯ, ಬಿಇಒ ನಾರಾಯಣ, ಅಧಿಕಾರಿಗಳಾದ ಸ್ವಾಮಿ, ವೆಂಕಟೇಶ್ ಮತ್ತಿತರರಿದ್ದರು.

# ಯಾರೋ ಬರೆಯುವ ಅರ್ಜಿಗೆ ತಲೆ ಕೆಡಿಸಿಕೊಳ್ಳಬೇಡಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹೊಳೆನರಸೀಪುರ: ಬಡವರ ಪರ ಕೆಲಸ ಮಾಡುವ ಅಧಿಕಾರಿಗಳು ಯಾರೋ ಬರೆಯುವ ಅರ್ಜಿಗಳಿಗೆ ತಲೆ ಕೆಡಿಸಿಕೊಳ್ಳಬಾರದು. ಕಾನೂನು ಪ್ರಕಾರ ಕೆಲಸ ಮಾಡಿಕೊಂಡಿರಿ ಎಂದು ಶಾಸಕ ಹೆಚ್.ಡಿ. ರೇವಣ್ಣ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ನಾನು ಈ ಕ್ಷೇತ್ರದ ಶಾಸಕನಾಗಿದ್ದು, ಪುರಸಭೆ ಕಚೇರಿಯೊಳಗೆ ಅವರ್ಯಾಕೆ ಬಂದು ಕೂರುತ್ತಾರೆ ಎಂದು ಕೇಳುವವರಿಗೆ ಉತ್ತರಿಸಬೇಕಾಗಿಲ್ಲ. ಪಟ್ಟಣದ ಸರ್ಕಾರಿ ಆಸ್ಪತ್ರೆ ವೈದ್ಯ ಡಾ. ಸೆಲ್ವಕುಮಾರ್ ರೋಗಿಯೊಬ್ಬರಿಗೆ ತುರ್ತು ಚಿಕಿತ್ಸೆ ನೀಡುತ್ತಿದ್ದಾಗ, ಮತ್ತೊಬ್ಬ ರೋಗಿಯನ್ನು ಕರೆದೊಯ್ದು ನಮಗೆ ಮೊದಲು ಸ್ಪಂದಿಸಲಿಲ್ಲ ಎಂದು ಫೇಸ್‌ಬುಕ್‌ಗೆ ಹಾಕುವ ಸಂಸ್ಕೃತಿ ಒಪ್ಪುವಂತದ್ದಲ್ಲ. ಇಂತಹಾ ಹಲವಾರು ಅರ್ಜಿ ಬರೆಯುವವರನ್ನು ಕಂಡಿದ್ದೇವೆ. ನಿವ್ಯಾರೂ ಹೆದರದೆ ಸರ್ಕಾರಿ ನಿಯಮ ಅನುಸರಿಸಿ ಕರ್ತವ್ಯ ನಡೆಸಿ ಎಂದರು.

ಸರಕ್ಷಿತ ಅರಣ್ಯ ಪ್ರದೇಶ ಮತ್ತು ಮೀಸಲು ಅರಣ್ಯ ಪ್ರದೇಶಗಳಲ್ಲಿ ಜಾನುವಾರುಗಳು ಮೇಯಲು ಬಿಡುವಂತಿಲ್ಲ ಎಂಬ ಸರ್ಕಾರದ ಇತ್ತೀಚಿನ ಆದೇಶ ಇದೆ. ಅದರಂತೆ ತಾಲ್ಲೂಕಿನ ಕಲ್ಲೊಡ್ಡೆಬೋರೆ ಕಾವಲ್ ಹಾಗೂ ಶ್ರೀಮಠದ ಅರಣ್ಯಪ್ರದೇಶದಲ್ಲಿ ಅರಣ್ಯ ಇಲಾಖೆ ಆದೇಶ ಪಾಲಿಸಿ. ಕಲ್ಲು ಗಣಿಗಾರಿಕೆ ನಡೆದಿದ್ದನ್ನೂ ಕಾನೂನಾತ್ಮಕವಾಗಿ ವಿಚಾರ ಮಾಡಿ ಕ್ರಮಕೈಗೊಳ್ಳಿ ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ತಾಲ್ಲೂಕಿನಲ್ಲಿ ಮುಸುಕಿನ ಜೋಳ ಬೆಳೆ ಸಂಪೂರ್ಣ ಹಾನಿಯಾಗಿದೆ. ಈ ಮೊದಲು ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ಆಲೂಗೆಡ್ಡೆ ಬೆಳೆಯಲಾಗುತ್ತಿತ್ತು. ಇದೇ ರೀತಿ ಅಂಗಮಾರಿ ಮತ್ತಿತರೆ ರೋಗಗ್ರಸ್ಥವಾಗಿ ಇದೀಗ ಬೆಳೆ ಪ್ರಮಾಣ ಇಲ್ಲದಾಗಿದೆ. ಮುಸುಕಿನ ಜೋಳ ಬೆಳೆ ಇನ್ನೂ 3 ವರ್ಷ ಬೆಳೆಯದಿರಿ ಎಂದು ಕೃಷಿ ಸಂಶೋಧಕರ ತಂಡ ವರದಿ ನೀಡಿದೆ. ಕೃಷಿ ಹಾಗೂ ಪೂರಕ ಇಲಾಖೆಗಳು ಸರಕಾರಕ್ಕೆ ಗಮನಕ್ಕೆ ತರಲು ಪತ್ರ ಹಾಕಿ ಎಂದು ಸಹಾಯಕ ಕೃಷಿ ನಿರ್ದೇಶಕಿ ಸವಿತ ಅವರಿಗೆ ತಿಳಿಸಿದರು.

ತಹಶೀಲ್ದಾರ್ ವೈ.ಎಂ. ರೇಣುಕುಮಾರ್, ಬಿಇಒ ಸೋಮಲಿಂಗೇಗೌಡ ಹಾಗೂ ಇತರರಿದ್ದರು.

# ಬಾಕಿ 19 ಅಂಗನವಾಡಿ ಕಟ್ಟಡ ಕಾಮಗಾರಿ ಬೇಗ ಮುಗಿಸಿ



ಅರಕಲಗೂಡು: ತಾಲ್ಲೂಕಿನಲ್ಲಿ ಅಂಗನವಾಡಿಗಳಿಗೆ ಸ್ವಂತ: ಕಟ್ಟಡ ಕಲ್ಪಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಿದ್ದು, ನಿಗದಿತ ಅವಧಿಯೊಳಗೆ ಬಾಕಿ ಇರುವ 19 ಕಟ್ಟಡಗಳ ಕಾಮಗಾರಿಯನ್ನು ಪೂರ್ಣಗೊಳಿಸಿ ಜಿಲ್ಲೆಯಲ್ಲಿಯೇ ತಾಲ್ಲೂಕು ಅಂಗನವಾಡಿ ಕಟ್ಟಡಗಳ ಸಮಸ್ಯೆಯಿಂದ ಮುಕ್ತವಾಗಬೇಕೆಂದು ಶಾಸಕ ಎ. ಮಂಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಸಭೆ ನಡೆಸಿದ ಅವರು, ಪಟ್ಟಣದಲ್ಲಿ 6 ಮತ್ತು ತಾಲ್ಲೂಕಿನ ಹಲವುಗಳ ಗ್ರಾಮಗಳಲ್ಲಿ 13 ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಹಣ ಬಿಡುಗಡೆಯಾಗಿದೆ. ಆದರೆ ಇನ್ನೂ ಕಾಮಗಾರಿ ಪೂರ್ಣಗೊಳಿಸಿಲ್ಲ. ಜಾಗ ಹಾಗೂ ಇತರೆ ಸಮಸ್ಯೆಗಳು ಇದ್ದರೇ ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಎಂಜಿನಿಯರ್ ಬಳಿ ಚರ್ಚಿಸಿ ಪರಿಹಾರ ಕಂಡುಕೊಂಡ ಕಟ್ಟಡಗಳ ನಿರ್ಮಾಣವನ್ನು ಮಾಡಿಸಬೇಕೆಂದು ಸಿಡಿಪಿಒ ವೆಂಕಟೇಶ್ ಅವರಿಗೆ ಸೂಚಿಸಿದರು.

ಪಟ್ಟಣದಲ್ಲಿ 22 ಮತ್ತು ತಾಲ್ಲೂಕಿನಾದ್ಯಂತೆ 270 ಸೇರಿ ಒಟ್ಟು 292 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸ್ವಂತಃ ಕಟ್ಟಡ 242ಕ್ಕೆ ಇದೆ. ಸರ್ಕಾರಿ ಶಾಲೆಗಳ ಕೊಠಡಿಯಲ್ಲಿ 15 ಕಾರ್ಯನಿರ್ವಹಿಸುತ್ತಿವೆ. ಪರ್ಯಾಯ ವ್ಯವಸ್ಥೆಯಲ್ಲಿ13 ಹಾಗೂ ಬಾಡಿಗೆ ಕಟ್ಟಡದಲ್ಲಿ 19 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ನಿರ್ಮಾಣ ಹಂತದಲ್ಲಿ ಇರುವ ಕಟ್ಟಡಗಳ ಸಂಖ್ಯೆ 19. ಅವಶ್ಯಕತೆ ಇರುವ ಕಟ್ಟಡಗಳ ಸಂಖ್ಯೆ 19 ಹಾಗೂ ಹೊಸದಾಗಿ ಕಟ್ಟಡಗಳನ್ನು ನಿರ್ಮಿಸಲು ಲಭ್ಯವಿರುವ ನಿವೇಶನಗಳು 13 ಇವೆ ಎಂದು ಮಾಹಿತಿ ನೀಡಿದರು.

ತಹಶೀಲ್ದಾರ್ ಜಾಗದ ಸಮಸ್ಯೆ ಬಗೆಹರಿಸಿಕೊಡುತ್ತಾರೆ. ಆಯಾ ಗ್ರಾಪಂ ವ್ಯಾಪ್ತಿಯಲ್ಲಿನ ನಿವೇಶನ ಕೊಡಲು ತಾಪಂ ಇಒ ಮುಂದಾಗಬೇಕು. ಜಿಪಂ ಎಂಜಿನಿಯರ್ ಕೂಡಲೇ ಟೆಂಡರ್ ಪ್ರಕ್ರಿಯೆ ಮುಗಿಸಿ ಕೆಲಸ ಆರಂಭಿಸಬೇಕಿದೆ. ಹಣ ಕೂಡ ಲಭ್ಯವಿದೆ. ಸಿಡಿಪಿಒ ವೆಂಕಟೇಶ್ ಪ್ರತಿ ಹಂತದಲ್ಲಿ ಆಗುವ ಬೆಳವಣಿಗೆಯನ್ನು ನನ್ನ ಗಮನಕ್ಕೆ ತರಬೇಕೆಂದು ಶಾಸಕರು ತಿಳಿಸಿದರು.

# ಜು.30ಕ್ಕೆ ಆರೋಗ್ಯಕ್ಕಾಗಿ ವಾಕಾಥಾನ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹೊಳೆನರಸೀಪುರ: ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಉದ್ದೇಶದಿಂದ ಜು. 28ರ ಸೋಮವಾರ ಆರೋಗ್ಯಕ್ಕಾಗಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ವೈ.ಎಂ. ರೇಣುಕುಮಾರ್ ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಎಲ್ಲ ಇಲಾಖೆಗಳು ಹಾಗೂ ಸಂಘ, ಸಂಸ್ಥೆಗಳು ಜನರ ಆರೋಗ್ಯ ರಕ್ಷಣೆ ಕಾರ್ಯದಲ್ಲಿ ಸಹಕರಿಸುವಂತೆ ಕೋರಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಬೇಕಾಗಿದೆ. ಕಾಲೇಜು ವಿದ್ಯಾರ್ಥಿಗಳು, ಸಂಘ, ಸಂಸ್ಥೆಯ ಮುಖಂಡರು ಹಾಗೂ ತಾಲ್ಲೂಕಿನ ಎಲ್ಲ ಇಲಾಖೆ ಅಧಿಕಾರಿಗಳು ಭಾಗವಹಿಸಬೇಕು ಎಂದು ತಿಳಿಸಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಎಚ್.ಎನ್. ರಾಜೇಶ್ ಮಾತನಾಡಿ, ಶ್ರಮ ಇಲ್ಲದ ಜೀವನ, ಇಂದಿನ ಆಹಾರ ಕ್ರಮ ಹಾಗೂ ದುಶ್ಚಟಗಳು ಹೃದ್ರೋಗಕ್ಕೆ ಕಾರಣವಾಗುತ್ತಿದೆ. ವ್ಯಾಯಾಮ ಅತಿ ಮುಖ್ಯ. ಜೀರ್ಣವಾಗದ ಆಹಾರ ಪದಾರ್ಥ ಬೇಡ. ದುಶ್ಚಟಗಳಿಂದ ದೂರವಿರಿ. ಉತ್ತಮ ಆರೋಗ್ಯ ಸುಖ ಜೀವನಕ್ಕೆ ಸೋಪಾನವಾಗಲಿದೆ ಎಂದು ತಿಳಿಸಿದರು. ಪುರಸಭಾ ಅಧ್ಯಕ್ಷ ಎಚ್.ಕೆ. ಪ್ರಸನ್ನ, ಮುಖ್ಯಾಧಿಕಾರಿ ಶಿವಶಂಕರ್, ನರ್ಸಿಂಗ್ ಕಾಲೇಜು ಪ್ರಾಂಶುಪಾಲ ಚಂದ್ರಶೇಖರ್ ಹಡಪದ, ಆರೋಗ್ಯ ನಿರೀಕ್ಷಕಿ ಮಮ್ತಾಜ್ ಬೇಗಂ, ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಸತೀಶ್ ಇತರರಿದ್ದರು.

# ಹೆಚ್ಚುವರಿ ಬಿಎಲ್‌ಒ ಹೊರೆ ಬೇಡ: ಮನವಿ



ಸಕಲೇಶಪುರ: ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆಯರೊಡನೆ ಚರ್ಚಿಸದೆ ಚುನಾವಣಾ ಕರ್ತವ್ಯಗಳಿಗೆ (ಬಿಎಲ್‌ಒ) ನೇಮಕ ಮಾಡಿರುವುದನ್ನು ವಿರೋಧಿಸಿ ತಹಶೀಲ್ದಾರ್ ಸುಪ್ರಿತಾ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗ ತಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಸಂಘದ ಅಧ್ಯಕ್ಷೆ ನಾಗಲಕ್ಷ್ಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಅಂಗನವಾಡಿ ಕಾರ್ಯಕರ್ತೆಯರು ಈಗಾಗಲೇ ಹಲವು ಮಹತ್ವದ ಕರ್ತವ್ಯಗಳಾದ ಶಾಲಾಪೂರ್ವ ಶಿಕ್ಷಣ (ಬೆಳಗ್ಗೆ10 ರಿಂದ ಮಧ್ಯಾಹ್ನ 1.30ರ ವರೆಗೆ ಕಡ್ಡಾಯ), ಪೌಷ್ಟಿಕ ಆಹಾರ ವಿತರಣೆ (ಗರ್ಭಿಣಿ, ಬಾಣಂತಿ ಮತ್ತು 6 ತಿಂಗಳಿಂದ 6 ವರ್ಷದ ಮಕ್ಕಳಿಗೆ) ಮತ್ತು ಮಕ್ಕಳ ಗುರುತಿಸುವಿಕೆ ಹಾಗೂ ಪೋಷಕರೊಂದಿಗೆ ಸಂವಾದ, ಗ್ರಾಮದ ಜನನ-ಮರಣ ದಾಖಲೆ ನಿರ್ವಹಣೆ, ಪೋಷಕರ ಸಭೆ, ಪೋಷಣ್ ಅಭಿಯಾನದಂತಹ ಸಾಮುದಾಯಿಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದಾರೆ. ಜುಲೈ 2025 ರಲ್ಲಿ ಯಸಳೂರು ಹೋಬಳಿಯ ದೊಡ್ಡನಹಳ್ಳಿ ಅಂಗನವಾಡಿ ಕಾರ್ಯಕರ್ತೆಯರನ್ನು ಯಾವುದೇ ಸೂಚನೆ ಇಲ್ಲದೆ ದೂರವಾಣಿ ಮೂಲಕ ಕರ್ತವ್ಯಕ್ಕೆ ನೇಮಿಸಲಾಗಿದೆ. ಕರ್ತವ್ಯ ನಿರ್ವಹಿಸದಿದ್ದರೆ ಸರ್ಕಾರಿ ನೌಕರಿಯಿಂದ ತೆಗೆದುಹಾಕುವ ಬೆದರಿಕೆ ಹಾಕುತ್ತಾರೆ. ಅಧಿಕಾರಿಗಳ ಕಿರುಕುಳ, ಒತ್ತಡ ಹಾಕುವುದರಿಂದ ಖಿನ್ನತೆಗೆ ಒಳಗಾಗುತ್ತಿದ್ದಾರೆ ಎಂದರು.

ಅಂಗನವಾಡಿ ಕಾರ್ಯಕರ್ತರನ್ನು ನಿಕ್ತಿಗೊಳಿಸದೆ ಗ್ರೂಪ್ ಸಿ ಸಿಬ್ಬಂದಿ ಆಗಿ ನೇಮಿಸಬೇಕು. ಅಂಗನವಾಡಿ ಕಾರ್ಯಕರ್ತೆಯರು ಮೂಲ ಕರ್ತವ್ಯಗಳನ್ನು ನಿರ್ವಹಿಸಲು ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಕಾರ್ಯದರ್ಶಿ ಸುಮಿತ್ರ, ಖಜಾಂಚಿ ನೇತ್ರಾವತಿ, ನಾಝಿಯಾ ತರನ್ನುಮ್, ಪ್ರೀತು, ಜ್ಯೋತಿ, ವಿಕ್ಟೋರಿಯಾ, ಲಲಿತಾ, ಯಶೋಧಾ, ತಾರಾ ಇನ್ನಿತರರು ಉಪಸ್ಥಿತರಿದ್ದರು.

# ಇತಿಹಾಸದಲ್ಲಿ ಈ ದಿನ

## ಜುಲೈ -25

**1978:** ಜಗತ್ತಿನ ಮೊದಲ ಟೆಸ್ಟ್ ಟ್ಯೂಬ್ ಬೇಬಿ, ಲೂಯಿಸ್ ಬ್ರೌನ್ ಇಂಗ್ಲೆಂಡ್‌ನಲ್ಲಿ ಜನಿಸಿದರು. ಇದು ವೈಜ್ಞಾನಿಕ ಪ್ರಗತಿಯ ದಾರಿಯಲ್ಲಿ ಒಂದು ಮಹತ್ವದ ಹೆಜ್ಜೆ.

**2007:** ಭಾರತದ 13ನೇ ರಾಷ್ಟ್ರಪತಿಯಾಗಿ ಪ್ರತಿಭಾ ಪಾಟೀಲ್ ಪದಗ್ರಹಣ. ಅವರು ಭಾರತದ ಮೊದಲ ಮಹಿಳಾ ರಾಷ್ಟ್ರಪತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

### ಜನನ

**1909:** ನವೀನ ಪಾಟ್ನಾಯಕ್ ಅವರ ತಂದೆ, ಪ್ರಸಿದ್ಧ ಸಾಹಿತಿ ಹಾಗೂ ರಾಜಕಾರಣಿ ಬಿಜು ಪಾಟ್ನಾಯಕ್.

**1920:** ರೊಸಾಲಿನ್ ಯಶರ್, ಅಮೆರಿಕನ್ ಜೀವವಿಜ್ಞಾನಿ, ಡಿಎನ್‌ಎ ರಚನೆಯ ಅನಾವರಣಕ್ಕೆ ಮಹತ್ವದ ಪಾತ್ರ ವಹಿಸಿದವರು.

### ಮರಣ

**1980:** ವಿನಾಯಕ್ ದಾಮೋದರ ಸಾವರ್ಕರ್ ಅವರ ಸಹೋದ್ಯೋಗಿ, ಸ್ವಾತಂತ್ರ್ಯ ಹೋರಾಟಗಾರ ಉಲ್ಲಾಸರಾವ್ ಕೋಲ್ಹೆ.

**2020:** ಪಂಡಿತ್ ಜಸ್ವಜಿತ್ ಸಿಂಗ್, ಭಾರತೀಯ ಆರ್ಥಿಕ ತಜ್ಞ ಹಾಗೂ ಮಾಜಿ ಪ್ಲಾನಿಂಗ್ ಕಮಿಷನ್ ಸದಸ್ಯ.

# ಒತ್ತಡದ ನೆರಳಲ್ಲಿ ಪಿಯುಸಿ ಕನಸುಗಳು

– ವಿಶ್ವಾಸ್ ಡಿ. ಗೌಡ

ಇಂದಿನ ಪಿಯುಸಿ (ಪ್ರಿ-ಯೂನಿವರ್ಸಿಟಿ) ಹಂತದ ವಿದ್ಯಾರ್ಥಿಗಳು ಅತ್ಯಂತ ಸಂಕೀರ್ಣ ಹಾಗೂ ತೀವ್ರ ಮಿಶ್ರ ಭಾವನೆ ಅನುಭವಿಸುತ್ತಿದ್ದಾರೆ. ಅವರು ಜೀವನದ ದಿಕ್ಕು ತೀರ್ಮಾನಿಸಬೇಕಾದ ಮಹತ್ವದ ಹಂತದಲ್ಲಿ ನಿಂತಿದ್ದಾರೆ. ಇದು ಕೇವಲ ಶಾಲೆಯಿಂದ ಕಾಲೇಜಿಗೆ ನಡೆಯುವ ಶೈಕ್ಷಣಿಕ ಸಂಕ್ರಾಂತಿಯಾಗಿಲ್ಲ. ವಿದ್ಯಾರ್ಥಿಗಳ ಅವರ ವ್ಯಕ್ತಿತ್ವ, ಭವಿಷ್ಯ ಮತ್ತು ಮಾನಸಿಕ ಸಮತೋಲನವನ್ನು ರೂಪಿಸುವ ಗಂಭೀರ ಹಾದಿ.

### 1. ಶೈಕ್ಷಣಿಕ ಒತ್ತಡ ಪರೀಕ್ಷೆಗಳ ಪೆಟ್ಟಿಗೆ

ಈ ದಿನಗಳಲ್ಲಿ ಪಿಯುಸಿ ಶಿಕ್ಷಣವು ಸ್ಪರ್ಧಾತ್ಮಕ ಮ್ಯಾರಥಾನ್ ಆಗಿದೆ. ಮಕ್ಕಳು, ಫೆಉಉಖ, ಒಉಉ, ಇಉಖ ಅಥವಾ ಇಅ ತರಹದ ವೃತ್ತಿಪರ ಪ್ರವೇಶ ಪರೀಕ್ಷೆಗಳ ಸಿದ್ಧತೆಯಲ್ಲಿ ಮಗ್ನರಾಗಿದ್ದಾರೆ. ಸಾಮಾನ್ಯವಾಗಿ ಪಿಯುಸಿ ವಿದ್ಯಾರ್ಥಿಗಳು ಶಾಲೆಯ ಪಾಠಗಳ ಜೊತೆಗೆ ಕೋಚಿಂಗ್ ಸೆಂಟರ್‌ಗಳಲ್ಲಿಯೂ ವ್ಯಸ್ತರಾಗಿದ್ದಾರೆ. ದಿನಕ್ಕೆ 10-12 ಗಂಟೆಗಳ ವ್ಯಾಸಂಗವು ಸಾಮಾನ್ಯ. ಈ ತೀಕ್ಷ್ಣ ಪಠ್ಯಕ್ರಮ ಮಕ್ಕಳನ್ನು ಯಂತ್ರಗಳಂತಾಗಿ ರೂಪಿಸುತ್ತಿದೆ. ಪಾಠಪಾಠಾಂತರದ ಮಧ್ಯೆ ಅವರು ತಮ್ಮ ಕೌಶಲ್ಯ, ಆಸಕ್ತಿಗಳನ್ನು ಅರಿತು ಬೆಳೆಸಿಕೊಳ್ಳುವ ಅವಕಾಶವಿಲ್ಲದೆ ಹೋಗುತ್ತಿದೆ.

### 2. ಅಂಕಪ್ರಧಾನ ವ್ಯವಸ್ಥೆಯ ಮರೆಚುಂಬಿ

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಅಂಕ ಎಂಬ ಅಳತೆಯೆ ಏಕೆಂದರೆ ಜೀವನದ ಏಳಿಗೆಯೇ ಅಂಕದ ಮೇಲೆ ನಿಂತಿರೋ ಹಾಗೆ ಪ್ರತೀತಿಯಿದೆ. ಪಿಯುಸಿ ವಿದ್ಯಾರ್ಥಿಗಳ ವ್ಯಕ್ತಿತ್ವ, ಸಾಮರ್ಥ್ಯ, ನೈಪುಣ್ಯತೆಗಳಿಗಿಂತಲೂ ಹೆಚ್ಚಾಗಿ ಶೇ. 95 ಮತ್ತು ಶೇ. 98 ಅಂಕಗಳಿಗೆ ಹೆಚ್ಚು ಒತ್ತುಗೆಯಿದೆ. ಈ ನಿರೀಕ್ಷೆಗಳು ಮಕ್ಕಳ ಮೇಲೆ ಭಾರಿ ಮನೋವೈಜ್ಞಾನಿಕ ಒತ್ತಡವನ್ನು ಹೇರುತ್ತವೆ. ಇನ್ನು ಉತ್ತಮವಾಗಬಹುದು, ಅವನು ಹೀಗೆ ಮಾಡಿದ, ನೀನು ಏಕೆ ಇಲ್ಲ? ಎಂಬ ಮಾತುಗಳು ಮಕ್ಕಳ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತವೆ.

### 3. ತಂತ್ರಜ್ಞಾನಆಶೀರ್ವಾದ ಅಥವಾ ಅಶಾಂತಿ?

ಇಂದಿನ ಪಿಯುಸಿ ವಿದ್ಯಾರ್ಥಿಗಳು ಮೊಬೈಲ್, ಇಂಟರ್ನೆಟ್, ಸ್ಮಾರ್ಟ್ ಕ್ಲಾಸ್, ಯೂಟ್ಯೂಬ್ ತರಹದ **earning platforms** ಬೆಳೆದು ಬರುವ ತಲೆಮಾರು. ತಂತ್ರಜ್ಞಾನ ಶಿಕ್ಷಣಕ್ಕೆ ಸಹಾಯ ಮಾಡುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ



ಈ ತಂತ್ರಜ್ಞಾನವೇ **distraction** ಆಗಿ ಪರಿಣಮಿಸುತ್ತಿದೆ. ಸೋಷಿಯಲ್ ಮೀಡಿಯಾ, ಗೇಮಿಂಗ್, ರೀಲ್‌ಗಳ ನಶೆ ವಿದ್ಯಾರ್ಥಿಗಳನ್ನು ಅಧ್ಯಯನದಿಂದ ದೂರವಿಟ್ಟು ಅವಧಿ ಬಡಿದೆಯೆಂಬ ಅರಿವಿಲ್ಲದಂತೆ ಮಾಡುತ್ತದೆ. ಇಂತಹಲ್ಲಿ ಸಮಯ ನಿರ್ವಹಣೆಯ ಶಿಸ್ತು ಬಹಳ ಅವಶ್ಯಕ.

### 4. ಭಾವನಾತ್ಮಕ ಮತ್ತು ಮಾನಸಿಕ ಬೆಳವಣಿಗೆಯ ಹಾದಿ

ಪಿಯುಸಿ ವಿದ್ಯಾರ್ಥಿಗಳ ಮನಸ್ಸು ಈ ಹಂತದಲ್ಲಿ ತೀವ್ರ ಬದಲಾವಣೆಗಳನ್ನು ಅನುಭವಿಸುತ್ತದೆ. ಸ್ನೇಹ, ಪ್ರೀತಿಯ ಪ್ರಾರಂಭಿಕ ಅನುಭವಗಳು, ಸ್ವಪ್ನಗಳು ಮತ್ತು ಆತ್ಮ ಗುರುತಿನ ಹುಡುಕಾಟ ಇವೆಲ್ಲವೂ ಅವರ ಚಿಂತನೆಗಳಲ್ಲಿರುತ್ತವೆ. ಆದರೆ ಈ ವಿಷಯಗಳ ಬಗ್ಗೆ ಪೋಷಕರು, ಶಿಕ್ಷಕರು ಮಾತನಾಡಲು ಮುಕ್ತವಾಗಿಲ್ಲ. ತಕ್ಷಣ ಅವಧು, ತಪ್ಪು ಎಂಬ ಮುದ್ರೆ ಹಾಕಲಾಗುತ್ತದೆ. ಇದರಿಂದ ಮಕ್ಕಳು ಡಿಜಿಠಿಜಬ್ಬಚಡ್ಲಿ ಆಗುತ್ತಾರೆ, ಯಾವತ್ತೊ ಒಬ್ಬಂಟಿಯಾಗಿ ತ್ಯಜಿಸಿ ಹೋಗುತ್ತಾರೆ. ಇದು ತೀವ್ರವಾದ ಮಾನಸಿಕ ಸಂಕಟಕ್ಕೆ ದಾರಿ ಮಾಡುತ್ತದೆ.

### 5. ಸಮಾಜ ಮತ್ತು ಕುಟುಂಬದ ಬಲವಂತದ ನಿರೀಕ್ಷೆಗಳು

ಔಔಡಾಕ್ಟರ್ ಆಗ್ಬೇಕುಔಔ, ಇಂಜಿನಿಯರ್ ಆಗ್ಬೇಕು, ಅಣ್ಣ ತಮ್ಮನಂತೆ ಐಎಎಸ್ ಆಗು ಇವು ಕುಟುಂಬ, ಶ್ರೇಣಿಕತೆಯ ಅಥವಾ ಪಕ್ಕದ ಮನೆಯಲ್ಲಿನ ಹೋಲಿಕೆಯ ಫಲಿತಾಂಶಗಳು. ಮಕ್ಕಳು ತಮ್ಮ ಆಸಕ್ತಿಗೆ ತಕ್ಕ ಹಾದಿಯನ್ನು ತೀರ್ಮಾನಿಸಿಕೊಳ್ಳುವ ಅವಕಾಶವಿಲ್ಲದೆ **imposed ambitions** ನತ್ತ ಎಳೆದೊಯ್ಯಲ್ಪಡುತ್ತಿದ್ದಾರೆ. ಈ ಒತ್ತಡದ ಮಧ್ಯೆ ಮಕ್ಕಳ ವೈಯಕ್ತಿಕ ಆಸಕ್ತಿಗಳು, ಕಲ್ಪನೆಗಳು ಮತ್ತು ಭವಿಷ್ಯದ ಕನಸುಗಳು ನುಜ್ಜುಗೊಳ್ಳುತ್ತವೆ.

### 6. ಶಿಕ್ಷಕರ ಪಾತ್ರ ಮಾರ್ಗದರ್ಶಕರಾಗಲೇಬೇಕೆ?

ಪದವಿಪೂರ್ವ ಶಿಕ್ಷಣ ಹಂತದಲ್ಲಿ ಶಿಕ್ಷಕರು ಕೇವಲ ಪಾಠ ಹೇಳಿಕೊಡುವವರು ಅಲ್ಲ. ಅವರು ಮಕ್ಕಳನ್ನು ಬದುಕಿನ ಪಾಠಕ್ಕೂ ತಯಾರಾಗಿಸಲು ಸಾಧ್ಯವಾಗಬೇಕು. ಆದರೆ ಕೆಲವೊಮ್ಮೆ ಶಿಕ್ಷಕರಿಗೆ ಕಾಲಾವಕಾಶವಿಲ್ಲ, ಸಂವೇದನೆ ಇಲ್ಲ, ಅಥವಾ ನಿಜವಾದ ಮೌಲ್ಯಾಧಾರಿತ ಶಿಕ್ಷಣದ ಅರಿವು ಕಡಿಮೆ. ವಿದ್ಯಾರ್ಥಿಗೆ ಉತ್ತಮ ಶಿಕ್ಷಕ ಸಿಕ್ಕರೆ ಅದು ಅವರ ಬದುಕಿನ ದಿಕ್ಕೇ ಬದಲಾಯಿಸಬಲ್ಲದು. ಹೀಗಾಗಿ ಶಿಕ್ಷಣ ಸಂಸ್ಥೆಗಳೂ ಶಿಕ್ಷಕರ ಸಾಮರ್ಥ್ಯವನ್ನೂ ಈ ಹಂತದಲ್ಲಿ ಶ್ರದ್ಧೆಯಿಂದ ರೂಪಿಸಬೇಕು.

### 7. ಪರಿಹಾರ ಮತ್ತು ಮಾರ್ಗಗಳು

ಪೋಷಕರಲ್ಲಿ ಸ್ಪಂದನೆ: ಪೋಷಕರು ನಡೆಸುವುದು ಅತ್ಯಾವಶ್ಯಕ. ಮಕ್ಕಳ ಭಯ, ಒತ್ತಡ, ಕನಸುಗಳನ್ನು ಕೇಳಿ, ಮನವಿ ಮಾಡಿ, ಸಮಾಧಾನದಿಂದ ನಿರ್ಧಾರ ತೆಗೆದುಕೊಳ್ಳಲು ಸಹಾಯ ಮಾಡಬೇಕು.

ಸಮತೋಲನದ ಶಿಕ್ಷಣ: ಪಠ್ಯ ಪಾಠದ ಜೊತೆಗೆ ಕೌಶಲ್ಯಾಭಿವೃದ್ಧಿ, ವ್ಯಕ್ತಿತ್ವ ವಿಕಾಸ ತರಗತಿಗಳು ಅನಿವಾರ್ಯ. ಈ ಮೂಲಕ ಮಕ್ಕಳು ಪಠ್ಯದಿಂದ ಹೊರಗೆ ಲೋಕವನ್ನು ಅರಿಯುವ ಅವಕಾಶ ಪಡೆಯುತ್ತಾರೆ.

ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ: ವಿದ್ಯಾರ್ಥಿಗಳಿಗೆ ಖಾಸಗಿ ಕೌನ್ಸೆಲಿಂಗ್, ಶಾಲಾ ಮಟ್ಟದ - ಅಗತ್ಯ. ಪ್ರತಿಯೊಂದು ಕಾಲೇಜು ಮನೋವೈಜ್ಞಾನಿಕ ಸಲಹೆಗಾರನನ್ನು ಹೊಂದಬೇಕು.

ಆಸಕ್ತಿಗೆ ತಕ್ಕ ದಿಕ್ಕು: ವಿದ್ಯಾರ್ಥಿಯು ವಿಜ್ಞಾನದಲ್ಲಿ ಅಲ್ಲ, ಬದಲಾಗಿ ಸಾಹಿತ್ಯದಲ್ಲಿ ಪ್ರಗತಿಶೀಲರೆಂದರೆ ಆ ಹಾದಿಗೆ ಒತ್ತಾಸೆ ನೀಡಬೇಕು. ಕನಸು ಅವರದು ಆದ್ದರಿಂದ ಆಯ್ಕೆಗೂ ಅವರಿಗೇ ಆದ್ಯತೆ ಇರಬೇಕು.

ಈಗ ಪಿಯುಸಿ ಓದುತ್ತಿರುವ ತಲೆಮಾರು ಅತ್ಯಂತ ಬುದ್ಧಿವಂತ, ಪ್ರಜ್ಞಾವಂತ ಮತ್ತು ನಿರಂತರ ಆತ್ಮಪರಿಶೀಲನೆಯ ಹಾದಿಯಲ್ಲಿ ಸಾಗುತ್ತಿದೆ. ಅವರು ಪುಸ್ತಕಗಳ ಹೊರಗಾದ ಜಗತ್ತನ್ನು ಅರಿಯುವ ಕನಸು ಹೊತ್ತಿದ್ದಾರೆ. ಆದರೆ ಈ ಕನಸುಗಳು ಒತ್ತಡ, ಹೋಲಿಕೆ, ನಿರೀಕ್ಷೆ ಎಂಬ ಹಗ್ಗಗಳಲ್ಲಿ ಕಟ್ಟಿಹಾಕಲ್ಪಡದಂತಿರಲಿ. ಪೋಷಕರು, ಶಿಕ್ಷಕರು, ಸಮಾಜ ಎಲ್ಲರೂ ಮೌನವಲ್ಲ, ಸ್ಪಂದನೆಯೊಂದಿಗೆ, ಸಹಾಯ ಮಾಡುವ ಹಸ್ತವಿಟ್ಟು ಈ ಮಕ್ಕಳ ಪಾಠದೊಳಗಿನ ಭವಿಷ್ಯವನ್ನು ಪ್ರಜ್ವಲಿಸಲು ಜೊತೆಯಾಗಬೇಕು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248